ಓ.ಎಸ್. ನಂಃ 376/2023
ಪಿ.ಡಬ್ಲ್ಯು-1 (ತ್ರಿಶಿಲಾ)

ದಿನಾಂಕ: 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಮ್.ಡಿ.ಪಿ. 1ನೇ ಪ್ರತಿವಾದಿ ಪರ ವಕೀಲರಿಂದಃ</u>**

ನಾನು 10ನೇ ತರಗತಿವರೆಗು ಓದಿದ್ದೇನೆ. ನನ್ನ ವಾದ ಪತ್ರಕ್ಕೆ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. 1ನೇ ಪ್ರತಿವಾದಿ ನನ್ನ ತಂದೆ, 2ನೇ ಪ್ರತಿವಾದಿ ನನ್ನ ತಾಯಿ, 3ನೇ ಪ್ರತಿವಾದಿ ನನ್ನ ಸಹೋದರ ಎಂದರೆ ಸರಿ. 1ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. 1ನೇ ಪ್ರತಿವಾದಿ ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರ ಪಡಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

2. ನನ್ನ ತಂದೆ ಮೂಲತಃ ರಾಮದುರ್ಗ ತಾಲೂಕಿನ ತೋರಗಲ್ ಗ್ರಾಮದವರು ಎಂದರೆ ಸರಿ. ನಮ್ಮ ತಂದೆಯ ಜನಕ ತಂದೆಗೆ 03 ಜನ ಗಂಡು ಮಕ್ಕಳು, 04 ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಮ್ಮ ತಂದೆಯನ್ನು ಭರಮಪ್ಪ ಇವರು ದಿನಾಂಕ 29/05/1968 ರಂದು ಆದ ನೋಂದಾಯಿತ ದತ್ತಕು ಪತ್ರದ ಅಡಿ ದತ್ತಕ ಪಡೆದಿದ್ದಾರೆ ಎಂದರೆ ಸರಿ. ನನ್ನ ತಂದೆಯ ದತ್ತಕು ತಂದೆ ಭರಮಪ್ಪ ಇವರಿಗೆ 07 ಜನ ಹೆಣ್ಣು ಮಕ್ಕಳಿರುತ್ತಾರೆ ಎಂದರೆ ಸರಿ. ಸದರಿ 07 ಜನ ಹೆಣ್ಣು ಮಕ್ಕಳ ಪೈಕಿ 04 ಜನ ಹೆಣ್ಣು ಮಕ್ಕಳು ಮದುವೆಯಾಗದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ಇನ್ನು ಉಳಿದ 03 ಜನ ಹೆಣ್ಣು ಮಕ್ಕಳಾದ ಪದ್ಮಾವತಿ, ಚಂಪಾವತಿ ಮತ್ತು ಗುಲಾಬಿ ಇವರನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ.

3. ಪದ್ಮಾವತಿ, ಚಂಪಾವತಿ ಮತ್ತು ಗುಲಾಬಿ ಇವರು ಈಗ ಮೃತಪಟ್ಟಿರುತ್ತಾರೆ, ಅವರ ವಾರಸುದಾರರನ್ನು ಈ ದಾವೆಯಲ್ಲಿ ನಾನು ಸೇರಿಸಿಲ್ಲ. ಪದ್ಮಾವತಿ, ಚಂಪಾವತಿ ಮತ್ತು ಗುಲಾಬಿ ಇವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಹಾಗೂ ಅವರು ಎಲ್ಲಿ ವಾಸ ಇದ್ದಾರೆ ಎಂದು ನನಗೆ ಮಾಹಿತಿ ಇದೆ. ಸದರಿ ಮೂರು ಜನರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ನಾನು ಮಾಡುವುದಿಲ್ಲ.

4. ನನ್ನ ತಂದೆ ಹಾಗೂ ಪದ್ಮಾವತಿ, ಚಂಪಾವತಿ ಮತ್ತು ಗುಲಾಬಿ ಇವರ ನಡುವೆ ಈ ಹೊತ್ತಿನವರೆಗು ದಾವಾ ಆಸ್ತಿಯಲ್ಲಿ ಪಾಲು ಆಗಿಲ್ಲ. ದಾವಾ ಆಸ್ತಿಗಳು ಕೊಣ್ಣೂರ ಗ್ರಾಮದಲ್ಲಿ ಪಾರ್ಶ್ವನಾಥ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನು ಎಂದರೆ ಸರಿಯಲ್ಲ. ಪಾರ್ಶ್ವನಾಥ ದೇವಸ್ಥಾನ ಪುರಾತನ ದೇವಸ್ಥಾನ ಎಂದರೆ ಸರಿ. ಸದರಿ ದೇವಸ್ಥಾನ ಪುರಾತತ್ವ ಇಲಾಖೆಯ ಅಧೀನದಲ್ಲಿ ಇದೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ಪಂಚರ ಕಮೀಟಿ ಇದ್ದು ಅವರೇ ದೇವಸ್ಥಾನದ ಉಸ್ತುವಾರಿಯನ್ನು ನೋಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ.

5. ಜೈನ ಸಮುದಾಯದಲ್ಲಿ ಭಕ್ತರಿಗೆ ಸಾವಕ ಮತ್ತು ಸಾವಕಿಯರು ಎನ್ನುತ್ತಾರೆ ಎಂದರೆ ಸರಿ. ದೇವಸ್ಥಾನದ ಅರ್ಚಕರಿಗೆ ಪಂಡಿತರು ಮತ್ತು ಉಪಾಧ್ಯಾಯರು ಎನ್ನುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ಪಾರ್ಶ್ವಿನಾಥ ದೇವಸ್ಥಾನದ ಸಾವಕ ಮತ್ತು ಸಾವಕಿಯರು ದಾನ ಕೊಟ್ಟ ಆಸ್ತಿಗಳು ಎಂದರೆ

ಸರಿಯಲ್ಲ. ದಾವಾ ಆಸ್ತಿಗಳು ಪಾರ್ಶ್ವನಾಥ ದೇವಸ್ಥಾನಕ್ಕೆ ಸಾವಕ ಮತ್ತು ಸಾವಕಿಯರು ದಾನ ಕೊಟ್ಟ ಆಸ್ತಿಗಳಾಗಿದ್ದರೂ ಸಹ ನಮ್ಮ ಅಜ್ಜನ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಜೈನ ಸಮುದಾಯದಲ್ಲಿ ಗರ್ಬಗುಡಿಯಲ್ಲಿರುವ ಮೂರ್ತಿಯನ್ನು ಗಂಡಸರು ಪೂಜೆ ಮಾಡುತ್ತಾರೆ ಎಂದರೆ ಸರಿ. ಕೊಣ್ಣೂರಿನ ಪಾರ್ಶ್ವನಾಥ ದೇವಸ್ಥಾನದ ಪೂಜೆಯನ್ನು ಉಪಾಧ್ಯಯರು ಮಾಡುತ್ತಾರೆ ಎಂದರೆ ಸರಿ. ಪಾರ್ಶ್ವನಾಥ ದೇವಸ್ಥಾನದ ಪೂಜೆಯನ್ನು ಮಾಡುತ್ತಿರುವ ಉಪಾಧ್ಯಯರಿಗೆ ಜೀವನ ನಿರ್ವಹಣೆಗೆ ಕೊಟ್ಟಂತಹ ಆಸ್ತಿಗಳೇ ದಾವಾ ಆಸ್ತಿಗಳು ಎಂದರೆ ಸರಿಯಲ್ಲ.

7. ದಾವಾ ಆಸ್ತಿಗಳು ನಮ್ಮ ಅಜ್ಜನಿಗೆ ಅವರ ಪೂರ್ವಜರಿಂದ ಬಂದಿರುತ್ತವೆ. ಭರಮಪ್ಪ ಇವರ ಪೂರ್ವಜರು ಯಾರು, ಅವರಿಗೆ ದಾವಾ ಆಸ್ತಿಗಳು ಹೇಗೆ ಬಂದಿವೆ ಎಂದು ನಾನು ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಆಸ್ತಿಗಳು ಜೈನ ಸಮುದಾಯದ ಆಸ್ತಿಗಳಾಗಿದ್ದು ಅವುಗಳನ್ನು ಉಪಾಧ್ಯಯರ ಜೀವನ ನಿರ್ವಹಣೆಗಾಗಿ ಕೊಟ್ಟ ಆಸ್ತಿಗಳೆಂದು ನನಗೆ ಗೊತ್ತಿದ್ದರೂ ಸಹ ದಾವಾ ಆಸ್ತಿಗಳು ನಮ್ಮ ಅಜ್ಜನ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸದರಿ ದೇವಸ್ಥಾನದ ಟ್ರಸ್ಟನ್ನು ಬಾಂಬೆ ಟ್ರಸ್ಟ್ ಕಾಯ್ದೆ ಅಡಿ ನೋಂದಣಿ ಕ್ರಮಾಂಕ ನಂ.A863 ರ ಅಡಿ ನೋಂದಣಿ ಆಗಿರುತ್ತದೆ ಎಂದರೆ ಸರಿಯಲ್ಲ. ಕೊಣ್ಣೂರ ಪಾರ್ಶ್ವನಾಥ ದೇವಸ್ಥಾನ ಬಾಂಬೆ ಟ್ರಸ್ಟ್ ಕಾಯ್ದೆ ಅಡಿ ನೋಂದಣಿ ಆಗಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಣ್ಣೂರ ಗ್ರಾಮದ ಪಾರ್ಶ್ವನಾಥ ದೇವಸ್ಥಾನ/ ಜಿನಮಂದಿರ ಇದು ವಂಶ-ಪರಂಪರೆಯಾಗಿ ಪೂಜೆ ಮಾಡಿಕೊಂಡು ಹೋಗುವಂತಹ ಟ್ರಸ್ಟ್ ಎಂದರೆ ಸರಿಯಲ್ಲ. ದೇವಸ್ಥಾನದ ಉಪಾಧ್ಯಾಯ ಮನೆತನದವರು ಪ್ರತಿ ವರ್ಷ ಒಬ್ಬೊಬ್ಬರ ಸರದಿಯಂತೆ ದೇವಸ್ಥಾನದ ಪೂಜೆ ಮಾಡಿಕೊಂಡು ಹೋಗುತ್ತಾರೆ ಎಂದರೆ ಸರಿ. ದಾವಾ ಅಸ್ತಿಗಳು ದೇವಸ್ಥಾನದ ಪೂಜೆ ಮಾಡುವವರಿಗೆ ಮಾತ್ರ ಸಂಬಂಧಪಟ್ಟಿದ್ದ, ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

9. ದಾವಾ ಆಸ್ತಿ ಟಿ.ಎಂ.ಸಿ.ನಂ.1738ನ್ನು ಭರಮಪ್ಪ ಇವರು ಶ್ರೀಮಂದರ ದರಗಶೆಟ್ಟಿ ಇವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ದಾವಾ ಆಸ್ತಿ ಟಿ.ಎಂ.ಸಿ.ನಂ.1736ನ್ನು ನಮ್ಮ ಅಜ್ಜ ಭರಮಪ್ಪ ಇವರು ರಾಮಚಂದ್ರ ಉಪಾಧ್ಯ ಇವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ನಮಗೆ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ನಮ್ಮ ಪೂರ್ವಜರ ಆಸ್ತಿ ಪತ್ರಗಳನ್ನು ಹಾಜರ ಮಾಡಿದ್ದೇನೆ. ಆ ಆಸ್ತಿ ಪತ್ರಗಳು ಯಾವುವು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ನಮಗೆ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರ ಪಡಿಸದೇ ಇದ್ದರೂ

ಸಹ ಹಾಜರ ಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಆಸ್ತಿಗಳು ನಮ್ಮ ಅಜ್ಜ ಭರಮಪ್ಪ ಇವರ ಸ್ವತಂತ್ರ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಸ್ವತಂತ್ರ ಆಸ್ತಿಗಳು, ಅವುಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಇನಾಮ ಜಮೀನುಗಳಾಗಿದ್ದು ಇನಾಮ ರದ್ದತಿ ಕಾಯ್ದೆ ಬಂದ ನಂತರ ನಮ್ಮ ತಂದೆ ದಾವಾ ಆಸ್ತಿಗಳ ಧಾರಣಾ ಮೊತ್ತವನ್ನು ಪಾವತಿ ಮಾಡಿ ತಮ್ಮ ಹೆಸರಿಗೆ ಮಂಜೂರು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಮ್ಮ ತಂದೆ ರೈತಾವಾ ಮಾಡಿಕೊಂಡಿದ್ದಾರೆ ಎಂದರೆ ಸರಿ. ಫಾರ್ಮ ನಂ.1 ಮತ್ತು 2ರ ಪ್ರಕಾರ ದಾವಾ ಜಮೀನುಗಳ ಅದಿಭೋಗದ ಹಕ್ಕನ್ನು ನನ್ನ ತಂದೆಗೆ ಕೊಟ್ಟಿರುತ್ತಾರೆ ಎಂದರೆ ಸರಿ.

11. ದಾವಾ ಆಸ್ತಿಗಳ ಉತಾರಗಳಲ್ಲಿ ನನ್ನ ತಂದೆ 1ನೇ ಪ್ರತಿವಾದಿಯ ಹೆಸರು ದಾಖಲ ಇದೆ ಎಂದರೆ ಸರಿ. ಈ ಹೊತ್ತಿಗೂ ಸಹ ದಾವಾ ಆಸ್ತಿಗಳ ತೆರಿಗೆಯನ್ನು ನಮ್ಮ ತಂದೆ ಪಾವತಿ ಮಾಡುತ್ತಾರೆ ಎಂದರೆ ಸರಿ. ದಾವಾ ಅಸ್ತಿಗಳಲ್ಲಿ ನಮ್ಮ ತಂದೆಯೇ ಉಳುಮೆ ಮಾಡುತ್ತಾರೆ ಎಂದರೆ ಸರಿ. ದಾವಾ ಜಮೀನುಗಳು ಮಸಾರಿ ಜಮೀನುಗಳು ಎಂದರೆ ಸರಿ. ದಾವಾ ಜಮೀನುಗಳಿಗೆ ಮೊದಲು ಇದ್ದ ಪೈಪಲೈನ್ ಹಾಳಾದ ನಂತರ ಮತ್ತೊಮ್ಮೆ ನನ್ನ ತಂದೆ ಹೊಳೆಯಿಂದ ಪೈಪಲೈನ್ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ

ತಂದೆಯೇ ಸಾಲ ಮಾಡಿ ದಾವಾ ಜಮೀನುಗಳಿಗೆ ಹೊಳೆಯಿಂದ ಪೈಪಲೈನ್ ಮಾಡಿಕೊಂಡ ವಿಷಯ ನಮಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಬೇಸಿಗೆಯಲ್ಲಿ ನೀರು ಕಡಿಮೆ ಆಗುತ್ತಿದ್ದುದ್ದರಿಂದ ನಮ್ಮ ತಂದೆ ದಾವಾ ಆಸ್ತಿಯಲ್ಲಿ ಬಾಂವಿ ತೆಗೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮ್ಮ ತಂದೆ ಒಂದು ಬೋರ್ ಹಾಕಿಸಿರುತ್ತಾರೆ ಹಾಗೂ ಸೋಲಾರ ಮೋಟರ್ ಕೂಡ್ರಿಸಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯೇ ಸಾಲ ಮಾಡಿ ದಾವಾ ಜಮೀನುಗಳಿಗೆ ಹೊಳೆಯಿಂದ ಪೈಪಲೈನ್ ಮಾಡಿಕೊಂಡಿರುವ ವಿಷಯ ಹಾಗೂ ದಾವಾ ಜಮೀನುಗಳಲ್ಲಿ ಬಾಂವಿ ಹಾಕಿಸಿರುವ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ ನಮ್ಮ ಅಜ್ಜನ ಕಾಲದಿಂದ ಬಾಂವಿ ಹಾಗೂ ಪೈಪಲೈನ್ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ.

12. ನನ್ನನ್ನು ಅಥಣಿ ತಾಲೂಕಿನ ಸಂಕುನಟ್ಟಿ ಗ್ರಾಮದ ಅನೀಲ ಉಪಾಧ್ಯೆ ಇವರ ಜೊತೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಈಗ ಸಮಾರು ವರ್ಷಗಳಿಂದ ನಾನು ನನ್ನ ಕುಟುಂಬದ ಜೊತೆ ಕಣ್ಣೂರ ಗ್ರಾಮದಲ್ಲಿ ವಾಸ ಇದ್ದೇನೆ ಎಂದರೆ ಸರಿ. ನನ್ನ ಯಜಮಾನರಿಗೆ ಸಿಮೆಂಟ್ ಇಟ್ಟಿಗೆ ತಯಾರ ಮಾಡುವ ಕಾರಖಾನೆ ಇದ ಎಂದರೆ ಸರಿಯಲ್ಲ. ಲೋಳಸೂರ ಗ್ರಾಮದಲ್ಲಿ ನನ್ನ ಯಜಮಾನರಿಗೆ ಸಿಮೆಂಟ್ ಇಟ್ಟಿಗೆ ತಯಾರ ಮಾಡುವ ಕಾರಖಾನೆ ಹಾಕಲು ನನ್ನ ತಂದೆ ರೂ.3,00,000/- ಹಣ ಕೊಟ್ಟು ಸಹಾಯ ಮಾಡಿದ್ದಾರೆ ಎಂದರೆ

ಸರಿಯಲ್ಲ. ಈಗ ನನ್ನ ಯಜಮಾನರು ಧುಪದಾಳದಲ್ಲಿ ಪರಪ್ಪನವರ ರವರ ಜೊತೆ ಸಿಮೆಂಟ್ ಇಟ್ಟಿಗೆ ತಯಾರ ಮಾಡುವ ಕಾರಖಾನೆ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸಿಮೆಂಟ್ ಇಟ್ಟಿಗೆ ಕಾರಖಾನೆ ಹಾಕಲು ನನ್ನ ಯಜಮಾನರಿಗೆ ಸಹಾಯ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13. ನನ್ನ ಯಜಮಾನರಿಗೆ ಹೃದಯ ಸಂಬಂಧಿ ತೊಂದರೆ ಉಂಟಾದಾಗ ನನ್ನ ತಂದೆ ನನ್ನ ಯಜಮಾನರ ಚಿಕಿತ್ಸೆಗೆ ರೂ.1,00,000/- ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ಶಿಕ್ಷಣಕ್ಕು ಸಹ ನನ್ನ ತಂದೆ ಅವರ ಕೈಲಾದಷ್ಟು ಸಹಾಯ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಟಿ.ಎಂ.ಸಿ. ನಂ.1736ರ ಕುರಿತು ಜೆ.ಎಂ.ಸಿ ನ್ಯಾಯಾಲಯದಲ್ಲಿ ಓ.ಎಸ್. ನಂ.693/2013ರಲ್ಲಿ ಒಂದು ದಾವೆ ಚಾಲ್ತಿಯಲ್ಲಿ ಇದೆ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ, ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ